ತಿಂಗಳಲ್ಲಿ ಸಹನಾ ಹೆಣವಾಗಿದ್ದಳು. ಸಹನಾ ಅನಿಲ್ ಮದುವೆ ಕನಸು ಕಮರಿ ಹೋಗಿತ್ತು . ಅನಿಲ್ ಹಾಗೂ ಸಹನಾಳ ತಂದೆತಾಯಿ ಪೊಲೀಸರಿಗೆ ಕೊಲೆ ಸಂಬಂಧ ದೂರು ನೀಡಿದರು. ಸಹನಾಳ ಸಾವಿನ ಘಟನೆ ನೆನೆದು ನಿಟ್ಟುಸಿರು ಬಿಡುತ್ತಾ ಊಟ ಮಾಡುತ್ತಿರುವಾಗ, ಅನಾಮಿಕನಿಂದ ಬಂದ ಹಠಾತ್ ಕರೆಯು ರಾಯರ ಜೀವನದ ಮಾನಸಿಕ ನೆಮ್ಮದಿಯನ್ನು ಏರುಪೇರು ಮಾಡಿತ್ತು.

ಕರೆ ಬಂದ ಮಾರನೇ ದಿನವೇ ರಾಮರಾಯರು ಹಾಗೂ ನರ್ಸ್ ಲಕ್ಷ್ಮಮ್ಮ ಶವವಾಗಿದ್ದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ಸಾವಿನ ಕುರಿತಾಗಿ ಮಾಹಿತಿ ಪಡೆದಿದ್ದರು. ಮೇಲ್ನೋಟಕ್ಕೆ ನೋಡುವುದಾದರೆ, ಒಂದೇ ಆಸ್ಪತ್ರೆಯ ಡಾಕ್ಟರ್ ಹಾಗೂ ನರ್ಸ್ ಒಂದೇ ದಿನದಲ್ಲಿ ಸಾವನ್ನಪ್ಪಿರುವಲ್ಲಿ ಸಾಮ್ಯತೆ ಇರುವಂತೆ ತೋರಿತು. ಈ ನಿಟ್ಟಿನಲ್ಲಿ ಸಾಗಿದರು ಪೊಲೀಸರು. ವೈದ್ಯರ ಸಾವು ಪೊಲೀಸರ ಸುತ್ತ ಅನುಮಾನದ ಹುತ್ತ ಸೃಷ್ಟಿಸಿತ್ತು.

ಪೊಲೀಸರಿಗೆ ಡಾಕ್ಟರ್ ರಘುರಾಮರಾಯರು, ನರ್ಸ್ ಲಕ್ಷ್ಮಮ್ಮ ಹಾಗೂ ಸಹನಾ ಈ ಮೂರು ಕೊಲೆಗಳು 'ತ್ರಿಕೋನ ಕೊಲೆಗಳು' ಎಂದೆನಿಸಿತು. ಎರಡೇ ದಿನದಲ್ಲಿ ಮೂರು ಕೊಲೆಗಳು ನಡೆದದ್ದು, ಪೊಲೀಸರಿಗೆ ಈ ಅನುಮಾನಾಸ್ಪದ ಕೊಲೆಗಳ ನಡುವೆ ಸಂಬಂಧ ಇರಬಹುದು ಎಂಬ ಅನುಮಾನ ಹೆಚ್ಚಿಸಿತ್ತು. ತ್ರಿವಳಿ ಕೊಲೆಯ ಮೇಲುಸ್ತುವಾರಿಯು ಪೊಲೀಸ್ ಅಧಿಕಾರಿ ಸುನೀಲ್ ಅವರ ಕೈಸೇರಿತ್ತು. ಸುನೀಲ್ ಪೊಲೀಸ್ ಇಲಾಖೆಯಲ್ಲಿಯೇ ಒಬ್ಬ ನಿಷ್ಠಾವಂತ, ಪ್ರಾಮಾಣಿಕ, ದಕ್ಷ ಅಧಿಕಾರಿ. ಇವರು ಕೈ ಹಾಕಿದ ಕೇಸು ಸೋತದ್ದೇ ಇಲ್ಲ. ಹಿರಿಯ ಪೊಲೀಸ್ ಅಧಿಕಾರಿ ರಾಜಶೇಖರ್ ಅವರು,

ಸುನೀಲ್, 'ಇದೊಂದು ತ್ರಿಕೋನ ಕೊಲೆ, ಕಳೆದ ಎರಡು ದಿನಗಳ ಅವಧಿಯಲ್ಲಿ ಡಾಕ್ಟರ್ ರಘುರಾಮರಾಯರು ಅವರ ಆಸ್ಪತ್ರೆ ನರ್ಸ್ ಲಕ್ಷ್ಮಮ್ಮ ಹಾಗೂ ಎಂಬಿಬಿಎಸ್ ವಿದ್ಯಾರ್ಥಿನಿ ಸಹನಾ ಈ ಮೂವರ ಕೊಲೆ ನಡೆದಿವೆ. ಮೇಲ್ನೋಟಕ್ಕೆ ಈ ಕೊಲೆಗಳ ಮಧ್ಯೆ ಸಂಬಂಧ ಇದೆ. ಆದರೆ ಇದೇ ವಿಷಯವನ್ನು ಹೀಗೆ ನಡೆದಿದೆ ಎಂದು ಅಂತಿಮವಾಗಿ ಹೇಳುವುದು ಕಷ್ಟ ಹಾಗೂ ತಪ್ಪು. ಸರಿಯಾದ ಸಾಕ್ಷ್ಯಾಧಾರಗಳಿಲ್ಲದೆ ಯಾವುದೇ ಕೊಲೆಯನ್ನು ನಿರ್ಧರಿಸುವುದು ಅಪರಾಧ. ಕಾನೂನು ಸಾಕ್ಷಿಯನ್ನು ಕೇಳುತ್ತದೆ. ಹೀಗಾಗಿ ಈ ಕೇಸನ್ನು ಸಾಲ್ವ್ ಮಾಡುವ ಸರಿಯಾದ ಪೊಲೀಸ್ ಎಂದರೆ ನೀವೇ ಅದಕ್ಕಾಗಿ ಈ ಕೇಸನ್ನು ನಿಮಗೆ ವಹಿಸಿದ್ದೇನೆ. ಈ ಕೊಲೆಗಳಿಗೆ ಸೂಕ್ತ ಸಾಕ್ಷಿಗಳ ಮೂಲಕ ಅಪರಾಧಿಯನ್ನು ಪತ್ತೆ ಹಚ್ಚುವ ಹೊಣೆ ನಿಮ್ಮದು' ಎಂದು ಭುಜ ತಟ್ಟಿದರು.

'ಸರಿ ಸರ್, ನಿಮ್ಮ ನಿರೀಕ್ಷೆ ಸುಳ್ಳಾಗುವುದಿಲ್ಲ. ಐ ವಿಲ್ ಡು ಮೈ ಲೆವೆಲ್ ಬೆಸ್ಟ್' ಎಂದು ಹೇಳಿ ಕೇಸಿನ ಫೈಲನ್ನು ಕೈಗೆತ್ತಿಕೊಂಡು, ಹಿರಿಯ ಪೊಲೀಸ್ ಅಧಿಕಾರಿಗೆ ಸಲ್ಯೂಟ್ ಹೊಡೆದು ಹೊರ ನಡೆದ. ಸುನಿಲ್ ಈ ಕೇಸಿನ ಕುರಿತು ಹೆಚ್ಚು ತಲೆಕೆಡಿಸಿಕೊಂಡಿದ್ದ. ಹಗಲುರಾತ್ರಿ ನಿದ್ರಾಹಾರ ಬಿಟ್ಟು ಯೋಚಿಸುತ್ತಿದ್ದ. ಪತ್ನಿ ರೇಖಾಳೊಂದಿಗೆ ಸಹ ಈ ಕೇಸಿನ ಬಗ್ಗೆ ಆಗಾಗ್ಗೆ ಚರ್ಚಿಸುತ್ತಿದ್ದ. ಎಲ್ಲಿಂದ? ಹೇಗೆ? ವಿಚಾರಣೆ ಮಾಡಬೇಕು ಎಂಬ ವಿಷಯದ ಕುರಿತು ಸುನಿಲ್‌ಗೆ ಗೊಂದಲದ ಹುಳ ತಲೆಹೊಕ್ಕಿತ್ತು.

ಸುನಿಲ್, ಕಾನ್ಸ್‌ಟೆಬಲ್ ರಾಮಪ್ಪನಿಗೆ,

'ರಾಮಪ್ಪ, ಸಹನಾಳ ತಂದೆ ತಾಯಿಯನ್ನು ಬರಲು ಹೇಳು' ಎಂದು ಹೇಳಿದರು. ಅದರಂತೆ, ರಾಮಪ್ಪ, ಬಸವರಾಜಪ್ಪ ಹಾಗೂ ಅವನ ಪತ್ನಿ ಸುಶೀಲಾಳನ್ನು ಸ್ಟೇಷನ್‌ಗೆ ಕರೆ ತಂದರು. ಸುನಿಲ್, ಬಸವರಾಜಪ್ಪನನ್ನು ವಿಚಾರಣೆ ಮಾಡಲಾರಂಭಿಸಿದ.

'ಸಹನಾ, ನಿಮ್ಮ ಒಬ್ಬಳೇ ಮಗಳ?'

'ಹೌದು ಸ್ವಾಮಿ'

'ಒಬ್ಬಳೇ ಮಗಳು ಬಡತನವಿದ್ದರೂ ತುಂಬಾ ಮುದ್ದಿನಿಂದ ಬೆಳೆಸಿದ್ವಿ. ನನ್ನ ಮಗಳು ಸಂಸ್ಕಾರವಂತೆ ಆಟಪಾಠ ಓದು ಎಲ್ಲಾದರಲ್ಲೂ ಮುಂದು' ಎಂದು ಕಣ್ಣೀರು ಹಾಕಿದ.

'ನನ್ನ ಮಗಳು ಯಾವತ್ತೂ ಯಾರ ತಂಟೆಗೂ ಹೋದವಳಲ್ಲ, ಒಳ್ಳೆಯ ಹುಡುಗಿ. ಅವಳಿಗೆ ಮದುವೆ ನಿಶ್ಚಯವಾಗಿತ್ತು ಆದರೆ, ಈಗ ಕೊಲೆಯಾಗಿ ಹೋಗಿದ್ದಾಳೆ' ಎಂದು ಕಣ್ಣೀರು ಹಾಕಿತು ಹೆತ್ತಕರುಳು.

'ನನ್ನ ಮಗಳನ್ನು ಕೊಂದವರಿಗೆ ಸರಿಯಾದ ಶಿಕ್ಷೆ ಕೊಡಿಸಿ, ಅವರನ್ನು ಸುಮ್ಮನೆ ಬಿಡಬೇಡಿ, ಜೈಲಿಗೆ ಕಳಿಸಿ, ಜೀವಾವಧಿ ಶಿಕ್ಷೆ ಕೊಡಿಸಿ' ಎಂದು ಹಿಡಿಶಾಪ ಹಾಕುತ್ತಾ ಪುನಃ ಕಣ್ಣೀರಾದರು ಹೆತ್ತವರು.

'ಸಮಾಧಾನ ಮಾಡಿಕೊಳ್ಳಿ ಅಮ್ಮ, ಖಂಡಿತಾ ನಿಮಗೆ ನ್ಯಾಯ ಸಿಕ್ಕೆ ಸಿಗುತ್ತದೆ. ಈ ನಿಟ್ಟಿನಲ್ಲಿ ನಾನು ಪ್ರಯತ್ನ ಮಾಡುತ್ತೇನೆ. ಸಹನಾ ನಿಮ್ಮ ಮಗಳು ಮಾತ್ರವಲ್ಲ ನನ್ನ ತಂಗಿ ಇದ್ದ ಹಾಗೆ' ಎಂದ ಸುನೀಲ್.

'ಹೆತ್ತ ಕರುಳಿನ ನೋವಿನ ಸಂಕಟ ಸ್ವಾಮಿ, ಕೊಂದವರಿಗೆಲ್ಲಿ ಗೊತ್ತಾಗಬೇಕು' ಎಂದು ಮಮ್ಮಲ ಮರುಗಿದ. ಬಸವರಾಜಪ್ಪನ ಮಾತಿಗೆ ಸುನಿಲ್ ಏನು ಉತ್ತರ ನೀಡದೆ ಮೌನವಾಗಿ ನಿಂತಿದ್ದ. ಬಸವರಾಜಪ್ಪ ಅವನ ಪತ್ನಿ ಸುಶೀಲಾಳ ವಿಚಾರಣೆಯಲ್ಲಿ ಸುನಿಲ್ ಇಬ್ಬರ ಮಾತುಗಳನ್ನು ರೆಕಾರ್ಡ್ ಮಾಡಿದ್ದ. ಈ ರೆಕಾರ್ಡ್ ಜಾಡು ಹಿಡಿದು ಸಹನಾ ನಿಶ್ಚಿತಾರ್ಥವಾಗಿದ್ದ ಹುಡುಗನ ವಿಚಾರ ತಿಳಿಯಲು ಅನಿಲ್‌ನನ್ನು ಸ್ಟೇಷನ್‌ಗೆ ಕರೆಸಲಾಯಿತು.

'ನೀನೇನಾ ಅನಿಲ್?'

'ಹೌದು ಸರ್'

'ಸಹನಾ ಗೊತ್ತಾ?

'ಹಾಂ, ಸರ್, ಗೊತ್ತು, 'ಸಹನಾಳನ್ನು ನಾನು ಪ್ರೀತಿ ಮಾಡುತ್ತಿದ್ದೆ ಅವಳಿಗೆ ಪ್ರೇಮ ನಿವೇದನೆಯನ್ನು ಸಹ ಮಾಡಿದ್ದೆ. ಆಕೆಯ ತಂದೆತಾಯಿಯನ್ನು ಕಂಡು ಮದುವೆಯ ವಿಚಾರ ಪ್ರಸ್ತಾಪ ಮಾಡಿದ್ದೆ. ನಮ್ಮ ಮದುವೆಗೆ ಹಿರಿಯರೆಲ್ಲರೂ ಒಪ್ಪಿಗೆ ನೀಡಿದ್ದರು. ಹಾಗಾಗಿ ನಿಶ್ಚಿತಾರ್ಥ ಸಹ ನಡೆದಿತ್ತು ಮದುವೆ ಕನಸು ಕಂಡಿದ್ದೆವು' ಎಂದ ಅನಿಲ್.

'ಹೌದೇನ್ರೀ?', ಎಂದ ಸುನಿಲ್, ಅನಿಲ್ ತಂದೆಯತ್ತ ನೋಡುತ್ತಾ... 'ಹೌದು ಸರ್, ಸಹನಾ ಕೇವಲ ನನ್ನ ಸೊಸೆಯಲ್ಲ ನನ್ನ ಮಗಳೆಂದೇ ನಾನು ಭಾವಿಸಿದ್ದೆ. ನಾನು ಇಂದು ಮಗಳನ್ನು ಕಳೆದುಕೊಂಡಿದ್ದೇನೆ, ಸೊಸೆಯನ್ನಲ್ಲ' ಎಂದರು ಗಣಪತಿರಾವ್.

ಸುನಿಲ್‌ಗೆ ಅವರ ಮಾತು ಸತ್ಯ ಎನಿಸಿದರೂ, ಮನಸ್ಸಿನಲ್ಲಿ ಒಂದು ಸಣ್ಣ ಅನುಮಾನ ಮೊಳಕೆಯೊಡೆಯಿತು.

'ಸರಿ ನೀವಿನ್ನು ಹೊರಡಬಹುದು ಆದರೆ ಅಗತ್ಯವಿದ್ದಾಗ, ವಿಚಾರಣೆಗೆ ಕರೆದಾಗ ಬರಬೇಕು' ಎಂದು ಷರತ್ತು ವಿಧಿಸಿ ಕಳುಹಿಸಿದರು.

ಅನಿಲ್, 'ಸರಿ ಸರ್ ಆಗಲಿ' ಎಂದವನು ತಂದೆಯೊಡನೆ ಹೊರಟ. ಸಹನಾಳ ಸ್ನೇಹಿತರನ್ನು ವಿಚಾರಣೆಗೆ ಕರೆದರೂ, ಆಕೆಯ ಸ್ನೇಹಿತರು ಭಯದಲ್ಲಿ 'ಸರ್, ನಮ್ಮದೇನೂ ತಪ್ಪಿಲ್ಲ, ಎಂದಿನಂತೆ ಅವತ್ತು ಕಾಲೇಜಿಗೆ ಹೋಗಿದ್ವಿ, ಕಾಲೇಜಿನ ಎದುರು ಸಹನಾ ಗುಂಡೇಟು ತಿಂದು ಒದ್ದಾಡುತ್ತಿದ್ದಳು. ಗುಂಡು ಆಕೆಯ ಎದೆಯನ್ನು ಹೊಕ್ಕಿತ್ತು. ಯಾರು ಶೂಟ್ ಮಾಡಿದ್ದರು ನಮಗೆ ತಿಳಿದಿಲ್ಲ ಸರ್'.

'ಮುಂದೆ, ಮುಂದೆ ಏನಾಯಿತು?'

'ಆಕೆಯನ್ನು ಕರೆದುಕೊಂಡು ತಂದು ಮಧ್ಯಾಹ್ನ ಮೂರು ಗಂಟೆ ಸುಮಾರಿಗೆ ಡಾ. ರಘುಪತಿರಾಯರ ಆಸ್ಪತ್ರೆಗೆ ಸೇರಿಸಿದ್ವಿ. ಸಹನಾಳನ್ನು ಉಳಿಸಿಕೊಡುವಂತೆ ಬೇಡಿಕೊಂಡ್ವಿ. ಆದರೆ ಡಾಕ್ಟರ್, ಆಪರೇಷನ್ ಥೀಯೆಟರ್‌ಗೆ ಹೋಗುವ ಮುನ್ನ ಸಹನಾಳ ಉಸಿರಾಟ ನಿಂತಿತ್ತು. ಡಾಕ್ಟರ್ ಸಹ ಬದುಕಿಲ್ಲ ಎಂದು ಹೇಳಿದರು. ನಾವು ಆಕೆಯ ಹೆತ್ತವರಿಗೆ ಎಲ್ಲಾ ವಿಷಯ ತಿಳಿಸಿ ಅಂತ್ಯಸಂಸ್ಕಾರ ಮಾಡಿದೆವು. ಇಷ್ಟೇ ಸರ್, ಇಷ್ಟು ಬಿಟ್ಟು ನಮಗೇನೂ ತಿಳಿದಿಲ್ಲ' ಎಂದಳು ಸಹನಾಳ ಸ್ನೇಹಿತೆ ಅದಿತಿ.

'ಸಹನಾ ಎಲ್ಲರಿಗೂ ಒಳ್ಳೆಯ ಸ್ನೇಹಿತೆ. ಅವಳು ಇಂದು ಇಲ್ಲವೆಂಬ ನೋವು ನಮ್ಮನ್ನು ಕಾಡುತ್ತಿದೆ ಸರ್' ಎಂದರು ಸ್ನೇಹಿತರು.

ಸರ್, 'ನಾವಿನ್ನು ಹೊರಡಬಹುದಾ ಹೆಚ್ಚು ಹೊತ್ತು ಸ್ಟೇಷನ್ನಲ್ಲಿ ಇದ್ದರೆ ನಮ್ಮ ತಂದೆತಾಯಿಗೂ ಒಂದು ಸಣ್ಣ ಅಳುಕು ಕಾಡುತ್ತದೆ' ಎಂದರು.

'ಸರಿ, ನೀವಿನ್ನು ಹೊರಡಿ'.

ಸಹನಾಳನ್ನು ಆಕೆಯ ಸ್ನೇಹಿತರು ಕೊಲೆ ಮಾಡಲು ಸಾಧ್ಯವೇ ಇಲ್ಲ ಎಂದು ಆಲೋಚಿಸಿದ ಸುನೀಲ್

